**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 451/2022**

| | | | |
|---|---|---|---|
| **ಹೆಸರು** | **:** | **ಸುನೀತಾ** | **ಚಾ.ಸಾ. 2** |
| **ಗಂಡನ ಹೆಸರು** | **:** | **ಹಣಮಂತ** | **ಪ್ರಾ.ಸಾ. 5** |
| **ವಯಸ್ಸು** | **:** | **40 ವರ್ಷ** | **ದಿನಾಂಕಃ 24-07-2025** |
| **ಉದ್ಯೋಗ** | **:** | **ಕೂಲಿ ಕೆಲಸ** | |
| **ವಾಸಸ್ಥಳ** | **:** | **ಐನಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-1, 3 ರಿಂದ 9ರವರು ನಮ್ಮ ಊರಿನವರು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಸಹ ನಮ್ಮ ಊರಿನವರು. ನಾನು ವಿದ್ಯಾಭ್ಯಾಸ ಮಾಡಿಲ್ಲ.

ಈಗ 1-2 ವರ್ಷಗಳ ಹಿಂದೆ ಆರೋಪಿತರ ಮನೆಯ ಹಿಂದೆ ನಾಲಾ ಹತ್ತಿರ ಶೌಚಾಲಯಕ್ಕೆ ಎಂದು ನಾನು, ಚಾಸಾ-4 ರಿಂದ 9 ರವರು ಹೋಗುತ್ತಿದ್ದಾಗ ನ್ಯಾಯಾಲಯದ ಮುಂದೆ ಇರುವ ಆರೋಪಿತರು ತಮ್ಮ ಮನೆಯ ಮೇಲೆ ನಿಂತಿರುತ್ತಾರೆ ಮತ್ತು ಯಾವಾಗಲೂ ಓಡಾಡುತ್ತಾರೆ. ಆರೋಪಿತರು ಇದೇ ರೀತಿ ಸಾಕಷ್ಟು ಬಾರಿ ಮಾಡುತ್ತಾ ಬಂದಿರುತ್ತಾರೆ. ನಮಗೆ ಶೌಚಾಲಯಕ್ಕೆ ಹೋಗಲು ತೊಂದರೆಯಾಗುತ್ತಿದ್ದ ಕಾರಣ ಪ್ರಕರಣವನ್ನು ದಾಖಲಿಸಿರುತ್ತೇವೆ.

ಈಗ ನೋಡುತ್ತಿರುವ ನಿಪಿ-3 ರಲ್ಲಿ ನನ್ನ ಹೆಬ್ಬರಳಿನ ಗುರುತು ಇದೆ. ಘಟನೆ ಕಾರಣ ಪೋಲಿಸರು ಬಂದಾಗ ನನ್ನ ಹೆಬ್ಬರಳಿನ ಗುರುತನ್ನು ಹಾಕಿದ್ದೇನೆ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ NHR ವಕೀಲರಿಂದಃ</u>**

ನಮ್ಮ ಗ್ರಾಮದಲ್ಲಿ ಸರಕಾರದಿಂದ ಶೌಚಾಲಯ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಗ್ರಾಮಸ್ಥರೆಲ್ಲರೂ ಸರಕಾರದಿಂದ ನಿರ್ಮಾಣವಾದ ಶೌಚಾಲಯದಲ್ಲಿ ಹೋಗುತ್ತಾರೆ ಎಂದರೆ ಸಾಕ್ಷಿ ಕಟ್ಟಡ ನಿರ್ಮಾಣ ಮಾಡಿ ಬಿಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ಸುತ್ತಾಮುತ್ತಾ ಬಹಳಷ್ಟು ಶೌಚಾಲಯಗಳು ಇವೆ ಎಂದರೆ ಸಾಕ್ಷಿ ಒಂದು ನಿರ್ಮಾಣ ಮಾಡಿದ್ದಾರೆ ಮತ್ತು ಅದರಲ್ಲಿ ನೀರು ಇಲ್ಲ ಎಂದು ನುಡಿಯುತ್ತಾರೆ. ಸರಕಾರ ವತಿಯಿಂದ ಶೌಚಾಲಯ ಕಟ್ಟಿಕೊಳ್ಳಲು ಆದೇಶವಿದೆ ಎಂದರೆ ಸಾಕ್ಷಿ ನಮ್ಮ ಹತ್ತಿರ ಜಾಗವಿಲ್ಲ ಎಂದು ನುಡಿಯುತ್ತಾರೆ. ಬಿಳಿ ಕಾಗದ ಮೇಲೆ ಪೋಲಿಸರು ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿ. ಪೋಲಿಸ ಠಾಣೆಯಲ್ಲಿ ಸದರಿ ದಾಖಲೆ ಮೇಲೆ ಪೋಲಿಸರು ಏನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ

ಎಂದರೆ ಸಾಕ್ಷಿ ನಮ್ಮ ಊರಿನಲ್ಲಿಯೇ ಬರೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿ ನಮ್ಮ ಮುಂದೆಯೇ ನಾವು ಹೇಳಿದಂತೆ ಬರೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯ ಸಂಗತಿಗಳನ್ನು ಪೋಲಿಸರು ನಮಗೆ ಓದಿ ಹೇಳಿಲ್ಲ. ಪೋಲಿಸರು ಎಷ್ಟು ಸಮಯಕ್ಕೆ ಬಂದಿದ್ದರು ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಸಮಯ ಅರ್ಥವಾಗುವುದಿಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಪಂಚನಾಮೆ ಮಾಡಲು ಮಧ್ಯಾಹ್ನ ಸಮಯಕ್ಕೆ ಬಂದಿದ್ದರು. ನಾನು ಆರೋಪಿತರೊಂದಿಗೆ ಎಷ್ಟು ವರ್ಷಗಳಿಂದ ಮಾತನಾಡುತ್ತಿಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿ ಮಾತನಾಡುತ್ತೇವೆ ಎಂದು ನುಡಿಯುತ್ತಾರೆ.

ನಾವು ಮಾಣಿಕ ರೆಡ್ಡಿರವರ ಹೊಲದಲ್ಲಿ ಕೆಲಸ ಮಾಡಲು ಹೋಗುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿತರ ಹೊಲದಲ್ಲಿಯು ಸಹ ಕೆಲಸ ಮಾಡಲು ಹೋಗುತ್ತೇವೆ ಎಂದು ನುಡಿಯುತ್ತಾರೆ. ನಾನು ಖಾಯಂ ಆಗಿ ಮಾಣಿಕ ರೆಡ್ಡಿರವರ ಹೊಲದಲ್ಲಿ ಕೆಲಸ ಮಾಡುತ್ತೇವೆ ಎಂದರೆ ಸರಿಯಲ್ಲ. ನಾವು ಮಾಣಿಕ ರೆಡ್ಡಿರವರ ಮಾತು ಮೀರುವುದಿಲ್ಲ ಎಂದರೆ ಸರಿಯಲ್ಲ.

1ನೇ ಆರೋಪಿ ಮಾಜಿ ಸೈನಿಕ ಎಂದರೆ ಸರಿ. 1ನೇ ಆರೋಪಿ ಹತ್ತಿರ 2-3 ಹಿರೋ ಹೋಂಡಾ ಶೋರೂಮಗಳು ಇವೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಆರೋಪಿತರು ಬಹಳಷ್ಟು ಕೆಲಸ ಮಾಡುತ್ತಾರೆ ಮತ್ತು ಬೆಳಗ್ಗೆ ಬೇಗ ಎದ್ದು ಹೋಗುತ್ತಾರೆ ಎಂದರೆ ಸರಿ. ಆರೋಪಿತರು ಬೆಳಗ್ಗೆ 7-8 ಗಂಟೆಗೆ ತಮ್ಮ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸಾಕ್ಷಿ ಅವರು ಆ ಸಮಯಕ್ಕೆ ತಮ್ಮ ಮನೆಯ ಮೇಲೆ ಇರುತ್ತಾರೆ ಎಂದು ನುಡಿಯುತ್ತಾರೆ.

ನಮ್ಮ ಮನೆ ಚತ್ತು ಆರ್.ಸಿ.ಸಿ. ಇದೆ. ಬೇರೆ ಅವರಿಗೆ ಕೇಳಿ ನಿಮ್ಮ ಮನೆಯ ಮೇಲೆ ಹೋಗುತ್ತಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಕೇಳದ ಮನೆಯ ಮೇಲೆ ಹೋಗುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತರು ತಮ್ಮ ಮನೆಯ ಮೇಲೆ ಹೋಗಿ ನಡೆಯಲು ಬೇರೆ ಅವರ ಪರವಾನಿಗೆ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿ. ಆರೋಪಿತರು ತಮ್ಮ ಮನೆಯ ಹಿಂದಿನ ಸ್ಥಳವನ್ನು ಕಬ್ಜ ಮಾಡಿದ ಕಾರಣ ನಮಗೆ ಶೌಚಾಲಯಕ್ಕೆ ಹೋಗಲು ತೊಂದರೆಯಾಗುತ್ತಿದೆ ಎಂದರೆ ಸರಿ. ಸದರಿ ಜಾಗ ಮೊದಲು ಖುಲ್ಲಾ ಇದ್ದು ಮತ್ತು ಈಗ ಆರೋಪಿತರು ತಮ್ಮ ಜಾಗದಲ್ಲಿ ಕಟ್ಟಿಕೊಂಡ ಕಾರಣ ಮತ್ತು ನಮಗೆ ತೊಂದರೆಯಾಗುತ್ತಿದೆ ಎಂದೂ ಸೂಚಿಸಿದಾಗ ಸಾಕ್ಷಿ ಆರೋಪಿತರು ತಮ್ಮ ಹಿಂದಿನ ಹೊಲವನ್ನು ಅನಾಧಿಕೃತವಾಗಿ ಕಬ್ಜ ಮಾಡಿದ್ದಾರೆ ಎಂದು ನುಡಿಯುತ್ತಾರೆ ಮತ್ತು ಸದರಿ ಜಾಗ ಶಿವಕುಮಾರರವರಿಗೆ ಸಂಬಂಧಪಟ್ಟಿದ್ದು ಎಂದು ನುಡಿಯುತ್ತಾರೆ. ಸದರಿ ಜಾಗ ಶಿವಕುಮಾರರವರಿಗೆ ಮತ್ತು ಆರೋಪಿತರಿಗೆ ಸಂಬಂಧಪಟ್ಟಿದ್ದು ಮತ್ತು ನಿಮಗೆ ಸಂಬಂಧಪಟ್ಟಿಲ್ಲ ಎಂದು ಸೂಚಿಸಿದಾಗ ಸಾಕ್ಷಿ ಸದರಿ ಜಾಗ ಶೌಚಾಲಯಕ್ಕೆಂದು ಬಿಟ್ಟಿದ್ದು ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿತರು ತಮ್ಮ ಹಿಂದಿನ ಸ್ದಳವನ್ನು ಕಬ್ಜ ಮಾಡಿದ ಕಾರಣ ನಮಗೆ ಶೌಚಾಲಯಕ್ಕೆ ಹೋಗಲು ತೊಂದರೆಯಾಗಿದ್ದು ಮತ್ತು ದೂರು ನೀಡಿದರೆ ಅವರು ಸ್ಥಳವನ್ನು ಬಿಡುತ್ತಾರೆ ಎಂದು ತಿಳಿದು ಸುಳ್ಳು ಪ್ರಕರಣ

ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿತರೊಂದಿಗೆ ಶಿವಕುಮಾರರವರಿಂದ ಖರೀದಿ ಮಾಡಿ ಮನೆ ಕಟ್ಟಿದ್ದಾರೆ ಎಂದು ಸೂಚಿಸಿದಾಗ ಸಾಕ್ಷಿ ಅವರು ರೆಡ್ಡಿರವರಿಂದ ಕಟ್ಟಿದ ಮನೆ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಚಾಸಾ-1ರವರ ಸಂಬಂಧಿಕರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಒಳ್ಳೆಯ ವ್ಯಕ್ತಿಗಳಿದ್ದು ಚಾಸಾ-1 ಮತ್ತು ಮಾಣಿಕ ರೆಡ್ಡಿರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಬೆಳಕು ಬರುವ ಮೊದಲು ಶೌಚಾಲಯಕ್ಕೆ ಹೋಗುತ್ತಾರೆ ಎಂದರೆ ಸರಿಯಲ್ಲ.

ಆರೋಪಿತರ ಮನೆಯ ಹಿಂದೆ ಮರಗಳು ಹಾಗೂ ಕಂಟಿಗಳು ಇವೆ ಎಂದರೆ ಸರಿ. ಆರೋಪಿತರ ಮನೆಯಿಂದ ನಾಲಾ ಕಾಣುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಎಲ್ಲರೂ ಸರಕಾರದಿಂದ ಕಟ್ಟಿರುವ ಶೌಚಾಲಯದಲ್ಲಿ ಶೌಚ ಹೊಗುತ್ತಿದ್ದರು ಸಹ ಚಾಸ-1 ಹಾಗೂ ಮಾಣಿಕ ರೆಡ್ಡಿರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಹಣಮಂತರವರು ಮಾಣಿಕ ರೆಡ್ಡಿರವರಲ್ಲಿ ಮಾತ್ರ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಮಾಣಿಕ ರೆಡ್ಡಿ ಮತ್ತು ಆರೋಪಿತರ ಮಧ್ಯ ಜಮೀನಿನ ಕಾರಣ ಜಗಳವಾಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದೂರು ನೀಡಿದ ದಿನದಂದೆ ಮಾಣಿಕ ರೆಡ್ಡಿ ಮತ್ತು ಆರೋಪಿತರ ಮಧ್ಯ ರಾಜೀ ಆಗಿದೆ ಎಂದರೆ ಸರಿ. ಸಾಕ್ಷಿ ಸದರಿ ಪ್ರಕರಣಕ್ಕೂ ಈ ಪ್ರಕರಣಕ್ಕೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ರಾಜೀಯಾದ ಕಾರಣ ಮಾಣಿಕ ರೆಡ್ಡಿರವರು ಆರೋಪಿತರಿಗೆ ಸತಾಯಿಸಲು ನಮ್ಮ ಮುಖಾಂತರ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**